ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ ನ್ಯಾಯಾಲಯ

**ಸಿ.ಸಿ. ನಂ. 247/2012**

**PW6**

ಸಾಕ್ಷಿದಾರರ ಹೆಸರು :- ಶಿವಾನಂದ ಮಹಾರುದ್ರಪ್ಪ ವನಹಳ್ಳಿ

ವಯಸ್ಸು :- 59 ವರ್ಷಗಳು

ಉದ್ಯೋಗ :- ಪಿ ಎಸ್ ಐ

ವಾಸಸ್ಥಳ :- ರಾಣೆಬೆನ್ನೂರು

ದಿನಾಂಕಃ09-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ- ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ದಿಃ 20-10-2010 ರಿಂದ ದಿಃ 06-05-2015 ರವರೆಗೆ ನಾನು ತಡಸ ಪೋಲಿಸ ಠಾಣೆಯಲ್ಲಿ ಎಚ್ ಸಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಪ್ರಕರಣದಲ್ಲಿ ದಿಃ 24-07-2014 ರಂದು ಹೈದರಾಬಾದ್ ರೇನ್ ಬಜಾರ ಪೋಲಿಸ ಠಾಣೆಯ ವ್ಯಾಪ್ತಿಯಲ್ಲಿ ಪ್ರೊಕ್ಲೇಮೇಶನ್ ಜಾರಿ ಮಾಡಲು ನಾನು ಮತ್ತು ಪಿ ಸಿ 1147 ಎನ್ ಎ ಮುಲ್ಲಾ ರವರು ಹೋದೆವು. ಹೈದರಾಬಾದ್ ರೇನ್ ಬಜಾರ ಪೋಲಿಸ ಠಾಣೆಯ ಇಬ್ಬರು ಸಿಬ್ಬಂದಿಯಾದ ಪಿಸಿ 9798 , ಹೋಮಗಾರ್ಡ 9346 , ಇಬ್ಬರು ಪಂಚರಾದ ಡಿ.ಅಶೋಕ ಮತ್ತು ಮುಸ್ತಾಕ ಇವರನ್ನು ಕರೆದುಕೊಂಡು ಹೋಗಿ ಹೈದರಾಬಾದ್ ರೇನ್ ಬಜಾರ ಪೋಲಿಸ ಠಾಣೆ, ತಹಶಿಲ್ದಾರ ಕಛೇರಿ , ನಗರ ಸಬೆ ಕಛೇರಿ , ಬಸ್ ನಿಲ್ದಾಣ , ರೇಲ್ವೆ ನಿಲ್ದಾಣ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಪ್ರೊಕ್ಲೇಮೇಶನ್ ಚೀಟಿಯನ್ನು ಅಂಟಿಸಿ ಪಂಚರ ಸಮಕ್ಷಮ ಪಂಚನಾಮೆ ಮಾಡಿದೆವು . ನಂತರ ದಿ 26-07-2014 ರಂದು ಮರಳಿ ಬಂದು ಪ್ರೊಕ್ಲೇಮೇಶನ್ ಜಾರಿ ಮಾಡಿದ ಕುರಿತು ಮಾನ್ಯ ನ್ಯಾಯಾಲಯಕ್ಕೆ ವರದಿ ಸಲ್ಲಿಸಿರುತ್ತೇನೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ.ಸರಿ.ಇದೆ.

ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.